ಮೊಸಕ್ಕೆ ಅವಕಾಶವಿಲ್ಲ. ಇದರಲ್ಲಿ ಕೋಡ್ ನಂಬರ್ ಕೊಡತಕ್ಕ ವಿಧಾನವೇ ಬೇರೆ. ಎಲ್ಲ ಟಿಕೆಟ್ಟುಗಳೂ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಮುಖಾಂತರ ಮಾರಾಟವಾಗುತ್ತದೆ. ನಮ್ಮ ರಾಜ್ಯದ ಟಿಕೆಟ್ಟಿನ ಬೆಲೆ ಕಡಿಮೆ. ಆದರೆ ಬಹುಮಾನದ ಮೊತ್ತ ಹೆಚ್ಚು. ಹೀಗೆ ಅನೇಕ ಕಾರಣಗಳಿಂದ ನಮ್ಮ ರಾಜ್ಯದ ಟಿಕೆಟ್ ವ್ಯಾಪಾರಕ್ಕೆ ಬೇರೆ ರಜ್ಯದ ಲಾಟರಿ ಟಿಕೆಟ್‌ನಿಂದ ಧಕ್ಕೆ ಬಂದಿಲ್ಲ.

ಶ್ರೀ ಎಂ. ಮಹದೇವ.—ಮಹಾರಾಷ್ಟ್ರದಲ್ಲಿ ನಿತ್ಯ ಲಾಟರಿ ಡ್ರಾ ಮಾಡುತ್ತಿದ್ದಾರೆ. ಆದೇರೀತಿ ಕರ್ನಾಟಕದಲ್ಲೂ ವ್ಯಾಪಾರ ಮಾಡುತ್ತಿರಾ ? ಮತ್ತು ಬಹುವಾನ ಆಕರ್ಷಣೀಯವಾಗಿ ವ್ಯಾಪಾರವುದರ ಜೊತೆಗೆ ಬಹುಮಾನದ ಮೊತ್ತವನ್ನೂ ಜಾಸ್ತಿ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಹಾರಾಷ್ಟ್ರದಲ್ಲಿ ದಿನನಿತ್ಯ ಲಾಟರಿ ಡ್ರಾ ಮಾಡಿರಬಹುದು, ಅಥವಾ ವೀಕ್ಲಿ ಮಾಡಿರಬಹುದು. ಆದರೆ ಬೇರೆಯವರು ಮಾಡಿದ್ದನ್ನೆಲ್ಲಾ ನಾವು ಅನುಕರಣೆ ಮಾಡಬೇಕಾದ ಅಗತ್ಯ ಇಲ್ಲ. ಇವತ್ತು ನಡೆದುಕೊಂಡು ಹೋಗುತ್ತಿರುವ ರೀತಿ ಅನುಕೂಲಕರವಾಗಿದೆ. ಇದರಲ್ಲಿ ದುರುಪಯೋಗಕ್ಕೆ, ಮೋಸಕ್ಕೆ ಅವಕಾಶ ಇಲ್ಲ. ಆದ್ದರಿಂದ ಇದನ್ನೂ ವಿಸ್ತಾರ ಮಾಡಬೇಕಾದರೆ ಯೋಚನೆ ಮಾಡಬೇಕು.

ಶ್ರೀ ಪಿ. ರಾಮಂದೇವ್.—ಲಾಟರಿ ಟಿಕೆಟ್ ಪ್ರಾರಂಭ ಮಾಡುವಾಗ ಒಂದು ನಿರ್ದಿಷ್ಟವಾದ ಉದ್ದೇಶವನ್ನು ಇಟ್ಟುಕೊಂಡು ಪ್ರಾರಂಭ ಮಾಡಿದರು. ಆದರೆ ಇವತ್ತು ಆ ಉದ್ದೇಶಕ್ಕೋಸ್ಕರ ಹಣವನ್ನು ಬಳಸಲಾಗುತ್ತಿದೆಯೇ ? ಅಥವಾ ಬೇರೆಯಂದಕ್ಕೆ ಬಳಸಲಾಗುತ್ತಿದೆಯೇ ?

ಅಧ್ಯಕ್ಷರು.—ಉದ್ದೇಶ ಏನು ಎಂಬುದನ್ನು ಹೇಳಿಬಿಡಿ.

ಶ್ರೀ ಪಿ. ರಾಮದೇವ್.—ಪ್ರಾಜೆಕ್ಟ್‌ಗೋಸ್ಕರ ಮಾಡಿದ್ದು ಎಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಒಂದೇಒಂದು ಉದ್ದೇಶ ಎಂದರೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು. ಬೇರೆ ಬೇರೆ ರಾಜ್ಯಗಳಲ್ಲಿ ಲಾಟರಿ ಪ್ರಾರಭವಾದಾಗ ಲಾಟರಿ ಟಿಕೆಟ್ ತೆಗೆದು ಕೊಳ್ಳತಕ್ಕ ಪ್ರವೃತ್ತಿ ನಮ್ಮ ಜನರಲ್ಲಿ ಬಂತು. ಬೇರೆ ರಾಜ್ಯದ ಟಿಕೆಟ್ ತೆಗೆದುಕೊಂಡು ಆ ಹಣ ಆ ರಾಜ್ಯಕ್ಕೆ ಹೋಗುವ ಬದಲು ನಮ್ಮ ರಾಜ್ಯಕ್ಕೇ ಬರಲಿ, ಆದರಿಂದ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದು ಎಂಬ ಉದ್ದೇಶ ಇತ್ತು. ಆ ಉದ್ದೇಶ ಸಫಲವಾಗಿದೆ.

ವಿಷಯ.—ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವುದು,

ಳಖಿಲ(ನಳವ) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ವ್ಯಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಪ್ರತಿ ತಾಲ್ಲೂಕಿಗೂ ಒಂದು ಕ್ರೀಡಾಂಗಣ ನಿರ್ಮಿಸುವ ಯೋಜನೆ ಈಗ ಯಾವ ಹಂತದಲ್ಲಿದೆ.

(ಆ) ಹೊಸನಗರಕ್ಕೆ ಮಂಜೂರಾದ ಕ್ರೀಡಾಂಗಣ ಈಗ ಯಾವ ಹಂತದಲ್ಲಿದೆ ?

ಶ್ರೀ ಜೀವರಾಜ ಆಳ್ವ (ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು).—

ಹಣದ ಮುಗ್ಗಟ್ಟಿನಿಂದ ಜಿಲ್ಲಾಮಟ್ಟದ ಕ್ರೀಡಾಂಗಣಗಳು ಪೂರ್ಣಗೊಳ್ಳುವ ತನಕ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣವನ್ನು ಕೈಗೊಳ್ಳಬಾರದೆಂದು ತೀರ್ಮಾನಿಸಲಾಗಿದೆ.

ಹೊಸನಗರದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಹೊಸನಗರ ಕ್ರೀಡಾಸಂಸ್ಥೆಯಿಂದ ಪ್ರಸ್ತಾವನೆ ಬಂದಿದ್ದು ಸಂಬಂಧಪಟ್ಟವರಿಗೆ ಕ್ರೀಡಾಂಗಣದ ನಕಾಶೆ ಹಾಗೂ ಅಂದಾಜು ವೆಚ್ಚವನ್ನು ಕಳುಹಿಸಿ ಕೊಡಲು ಕೋರಲಾಗಿತ್ತು. ಆದರೆ ಈ ವರೆಗೂ ಆ ವಿವರಗಳು ಬಂದಿಲ್ಲ.

ಶ್ರೀ ಬಿ. ಸ್ವಾಮಿ ರಾವ್.— ಹೊಸನಗರದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಶೀಘ್ರ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜೀವರಾಜ್ ಆಳ್ವ.—ವಿವರಗಳನ್ನು ಆದಷ್ಟು ಜಾಗ್ರತೆ ಕಳುಹಿಸಿಕೊಟ್ಟರೆ ಕ್ರಮ ತೆಗೆದು ಕೊಳ್ಳಬಹುದು.